International Journal of Kannada Research 2020; 6(1): 111-115

International Journal of Kannada Research
www.kannadajournal.com

ISSN: 2454–5813
IJKR 2020; 6(1): 111-115
© 2020 IJKR
www.kannadajournal.com
Received: 13-02-2020
Accepted: 16-03-2020

ಎನ್. ಮಹದೇವಸ್ವಾಮಿ
ಪ್ರಾಂಶುಪಾಲರು ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ, ಕರ್ನಾಟಕ, ಭಾರತ

Corresponding Author:
ಎನ್. ಮಹದೇವಸ್ವಾಮಿ
ಪ್ರಾಂಶುಪಾಲರು ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ, ಕರ್ನಾಟಕ, ಭಾರತ

# ನಾಲ್ವಡಿ ಕೃಷ್ಣರಾಜ ಒಡೆಯರ ಸಾಂಸ್ಕೃತಿಕ ಕೊಡುಗೆಗಳು

**ಮಹದೇವಸ್ವಾಮಿ**

**ಪೀಠಿಕೆ**

ಮೈಸೂರು ಸಂಸ್ಥಾನವನ್ನಾಳಿದ 24ನೇ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಕ್ರಿ.ಶ. 1902 ರಿಂದ 1940 ರವರೆಗೆ ಆಡಳಿತ ನಡೆಸಿದರು. ಇವರ 38 ವರ್ಷಗಳ ಆಳ್ವಿಕೆಯಲ್ಲಿ ಸಾಕಷ್ಟು ರಚನಾತ್ಮಕ ಹಾಗೂ ಪ್ರಗತಿಪರವಾದ ಯೋಜನೆಗಳ ಮೂಲಕ ಮೈಸೂರು ಸಂಸ್ಥಾನವನ್ನು ಅಭಿವೃದ್ಧಿಪಡಿಸಿದ್ದರ ಜೊತೆಗೆ ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಆಡಳಿತ ನಡೆಸಿದರು. ಮೈಸೂರು ಸಂಸ್ಕೃತಿಯನ್ನು ಅಂತರತಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಿದ ಇವರನ್ನು ಸಾಂಸ್ಕೃತಿಕ ರಾಯಬಾರಿ ಎಂದು ಪ್ರಸಿದ್ದರಾಗಿದ್ದರು. ಪ್ರಸ್ತುತ ಲೇಖನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಸಾಂಸ್ಕೃತಿಕ ಬೆಳವಣಿಗೆಗೆ ನೀಡಿದ ಕೊಡುಗೆ ಮತ್ತು ಪೋಷಣೆಯನ್ನು ನೀಡಿ ಇಲ್ಲಿನ ಜನಮಾನಸದಲ್ಲಿ ಪ್ರಗತಿಪರದೂರದರ್ಶಿ ಪ್ರಭು ಎಂಬುದಾಗಿ ಖ್ಯಾತರಾದರು. ಇವರ ಕಾಲದಲ್ಲಿನ ಸಾಂಸ್ಕೃತಿಕ ಕೊಡುಗೆಗಳನ್ನು ಹಾಗೂ ಇತರ ಸಂಸ್ಕೃತಿಯೊಡನೆ ಸಾಮರಸ್ಯ ಸಂಯೋಜನೆಗಳನ್ನು ಚರ್ಚಿಸುವುದೇ ಈ ಪ್ರಬಂಧದ ಉದ್ದೇಶವಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರು 1884 ರಲ್ಲಿ ಜನಿಸಿದರು. 10ನೇ ಚಾಮರಾಜ ಒಡೆಯರ ಸುಪುತ್ರರಾದ ಇವರು 1902 ರಿಂದ 1940 ರವರೆಗೆ ಆಡಳಿತ ನಡೆಸಿ ಮೈಸೂರು ಸಂಸ್ಥಾನವನ್ನು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋದುದಷ್ಟೆ ಅಲ್ಲದೆ ಸಂಸ್ಥಾನವನ್ನು ಒಂದು ಮಾದರಿ ಸಂಸ್ಥಾನವನ್ನಾಗಿ ಮಾರ್ಪಡಿಸಿದ ಹೆಗ್ಗಳಿಕೆ ಇವರದ್ದು. ನಾಲ್ವಡಿ ಕೃಷ್ಣರಾಜ ಒಡೆಯರು ವಿನಯಶೀಲರು, ಸಮದರ್ಶಿತ್ವ ದೂರದೃಷ್ಟಿ, ಧರ್ಮಪ್ರಿಯತೆ, ತಾಳ್ಮೆ, ನ್ಯಾಯ ನಿಷ್ಠೆ, ಪ್ರಜಾವಾತ್ಸಲ್ಯ, ಕಲಾ ಪ್ರೇಮ, ಸಂಗೀತಾಭಿರುಚಿ ಮುಂತಾದವು ಇವರ ವ್ಯಕ್ತಿತ್ವಕ್ಕೆ ಮೆರಗನ್ನು ನೀಡಿದವು. ಇವರ ಕಾಲದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೀಜಸ್ವರೂಪದ ಘಟನೆಗಳು ಘಟಿಸಿದವು. ಬ್ರಿಟೀಷರ ಅಧೀನದಲ್ಲಿದ್ದ ಕೃಷ್ಣರಾಜ ಒಡೆಯರು ವೈಭವಯುವಾದ ಜೀವನ ನಡೆಸಬಹುದಾಗಿದ್ದರೂ ಕೂಡ ಸದಾಕಾಲ ಪ್ರಜೆಗಳ ಹಿತಚಿಂತಕರಾಗಿ ಪ್ರಜಾ ಕಲ್ಯಾಣದ ಕಾರ್ಯಕ್ರಮಗಳನ್ನು ರೂಪಿಸಿ ಅಭಿವೃದ್ಧಿ ಪರವಾದ ಯೋಜನೆಗಳನ್ನು ಜಾರಿಗೆ ತಂದರು. ಇವರನ್ನು ಆದರ್ಶ ಪ್ರಜಾ ಪ್ರಭುತ್ವವದಿ ಎಂದು ಐರೋಪ್ಯ ರಾಷ್ಟ್ರಗಳ ಜನತೆ ಭಾವಿಸಿದ್ದರು[1]

ಮೈಸೂರು ಸಂಸ್ಥಾನ ಎಲ್ಲ ರಂಗಗಳಲ್ಲಿಯೂ ಅಭಿವೃದ್ಧಿ ಹೊಂದಿತು. ಸಾಂಸ್ಕೃತಿಕವಾಗಿ ಹೆಜ್ಜೆಗುರುತನ್ನು ಭಾರತ ಹಾಗೂ ಹೊರರಾಜ್ಯಗಳಲ್ಲಿ ಮೂಡಿಸಿತು. ಈ ಹಿನ್ನಲೆಯಲ್ಲಿ ಮೈಸೂರು ಸಂಸ್ಥಾನವನ್ನು ಬಲಿಷ್ಠರಾಜ್ಯ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜಋಷಿ ಎಂಬುದಾಗಿ ಮಹಾತ್ಮ ಗಾಂಧೀಜಿಯವರು ಕರೆದರು[2] ನಾಲ್ವಡಿ ಕೃಷ್ಣರಾಜ ಒಡೆಯರು ಬಾಲ್ಯದಿಂದಲೂ ಕೂಡ ಭಾರತೀಯ ಸನಾತನ ಸಂಸ್ಕೃತಿ ಹಾಗೂ ಆಧುನಿಕ ಸಂಸ್ಕೃತಿಯ ಪ್ರಭಾವದಿಂದಲೇ ಶಿಕ್ಷಣ ಪಡೆದಿದ್ದರು, ಜೊತೆಗೆ ಬಾಲ್ಯದಲ್ಲಿಯೇ ಇಂಗ್ಲೀಷ್ ಗುರುಗಳಿಂದ ಪಾಠ ಕೇಳಿದ್ದರಿಂದ ಪಾಶ್ಚಿಮಾತ್ಯ ಸಂಸ್ಕೃತಿಯ ಪರಿಚಯವಾಯಿತು. ಪಾಶ್ಚಾತ್ಯ ಪ್ರಭಾವವಿದ್ದರೂ ಕೂಡ ಈ ನೆಲದ ಸಂಸ್ಕೃತಿಯನ್ನು ಕೂಡ ಮರೆಯಿದೆ. ಎರಡನ್ನು ಸಮೀಕರಿಸುವ ಯತ್ನವನು ಮಾಡಿದರು. ಪಾಶ್ಚಿಮಾತ್ಯ ಸಂಸ್ಕೃತಿಯ ಈ ನೆಲದ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಗೊಳಿಸಿ ತಮ್ಮತನವನ್ನು ತೋರಿದರು. ಇವರು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಉಪೇಕ್ಷಿಸಿದರು ಅಥವಾ ತೆಗಳಿದರು ಎನ್ನುವುದಕ್ಕಿಂತ ಅಲ್ಲಿದ್ದ ಒಳ್ಳೆಯ ಅಂಶಗಳನ್ನು ಈ ನೆಲದ ಸಂಸ್ಕೃತಿಗೆ ಹೊಂದಿಸುವ ಪ್ರಯತ್ನ ಮಾಡಿದರು. ಪಾಶ್ಚಿಮಾತ್ಯರಿಗೆ ಇಲ್ಲಿನ ಪರಂಪರೆ ಮತ್ತು ಸಂಸ್ಕೃತಿಯನ್ನು ಬೇರೊಂದು ನೆಲದಲ್ಲಿ ಪ್ರಚಾರ ಮಾಡಿದರು. ಇದಕ್ಕೆ ಅವರು ಬಳಸಿಕೊಂಡಿದ್ದು ಮೈಸೂರು ನಾಡಹಬ್ಬ 'ದಸರಾ'. ಜಗದ್ವಿಖ್ಯಾತವಾತ ಮೈಸೂರು ದಸರಾ ಸಂದರ್ಭದಲ್ಲಿ ಭಾರತದ ಉದ್ದಗಲಕ್ಕೂ ಹರಡಿಕೊಂಡಿದ್ದ ಕಲೆಗಳನ್ನು ಪ್ರೋತ್ಸಾಹಿಸಿ ಕಲಾಕರರನ್ನು ತಮ್ಮ ಆಸ್ಥಾನಕ್ಕೆ ಆಹ್ವಾನಿಸಿ

ಅವರಿಂದ ಕಲಾ ಪ್ರದರ್ಶನಗಳನ್ನು ಏರ್ಪಡಿಸಿ ಸಾಂಸ್ಕೃತಿಕ ರೂವಾರಿಗಳೆನಿಸಿಕೊಂಡರು. ದಸರಾ ಹಾಗೂ ವಿಶೇಷ ಸಂದರ್ಭಗಳಲ್ಲಿ ಮೈಸೂರಿಗೆ ಕಲಾಕಾರರನ್ನು, ವಿದ್ವಾಂಸರನ್ನು ಬರಮಾಡಿಕೊಂಡು ಸತ್ಕರಿಸಿ, ಸನ್ಮಾನದ ಹಿರಿಮೆಯನ್ನು ಹೆಚ್ಚಿಸಿದ ಮಹಾರಾಜರು ದೇಶದ ಬೇರೆ ಸಂಸ್ಥಾನಗಳ ರಾಜ ಮಹಾ ರಾಜರನ್ನು ಹಾಗೂ ಗಣ್ಯರನ್ನು ದಸರಾ ಕಾರ್ಯಕ್ರಮಕ್ಕೆ ಅಹ್ವಾನ ನೀಡುತ್ತಿದರು. ರವಿಂದ್ರನಾಥ ಟ್ಯಾಗೂರರು ಮೈಸೂರಿಗೆ ಬೇಟಿ ನೀಡಿದ್ದರು. ಈ ರೀತಿ ನಾಲ್ವಡಿ ಕೃಷ್ಣರಾಜ ಒಡೆಯರು ಸಾಂಸ್ಕೃತಿಕ ರಾಯಭಾರತ್ವವನ್ನು ನಡೆಸಿದರು ಹಾಗೂ ಮೈಸೂರು ದಸರಾ ಸಾಂಸ್ಕೃತಿಕ ಸಂದೇಶ ವಾಹಕವಾಯಿತು. ಇವರ ಕಾಲದಲ್ಲಿ ಮೈಸೂರು ಅರಮನೆಯು ಸಾಂಸ್ಕೃತಿಕ ಚಟುವಟಿಕೆಗಳ ಸುವರ್ಣಯುಗವಾಗಿತ್ತು. ಮೈಸೂರು ನಗರವನ್ನು ರಾಜ್ಯದ ಕಲೆಯ ಕೇಂದ್ರವನ್ನಾಗಿ ಮಾಡಿ ಲಲಿತ ಕಲೆಗಳ ಮೂಲಕ ಮಾನವ ಕೊಟಿಯ ಹೃದಯಗಳನ್ನು ಒಟ್ಟು ಗೂಡಿಸಬೇಕು ಎಂಬುದು ಇವರ ದೇಯವಾಗಿತ್ತು.

19 ನೇ ಶತಮಾನದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಭಾರತೀಯ ಸಮಾಜದಲ್ಲಿ ಒಂದು ರೀತಿಯ ಸಾಂಸ್ಕೃತಿಕ ಸಂಚಲನವನ್ನು ಉಂಟುಮಾಡಿತು. ಇದಕ್ಕೆ ಕಾರಣ ಪಾಶ್ಚಿಮಾತ್ಯ ಸಂಸ್ಕೃತಿ ಹಾಗೂ ಭಾರತೀಯ ಸಂಸ್ಕೃತಿಗಳು ಒಂದನ್ನೊಂದು ಮುಖಾಮುಖಿಯಾದಾಗ ಹೊಸ ಚಿಂತನೆಗಳು ಮೂಡಲಾರಂಭಿಸಿದರು. ಮೈಸೂರು ಸಂಸ್ಥಾನದ ಮೇಲೆ ಉಂಟಾದ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಲ್ಲೇ ಸ್ಥಳಿಯ ಮೈಸೂರಿನ ಸಂಸ್ಕೃತಿಯನ್ನು ಬೆಳೆಸಿದರು. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಜೀವನ ಶೈಲಿ ವೇಷಭೂಷಣ, ಆಹಾರ ಪದ್ದತಿಯಲ್ಲಿ ಬದಲಾವಣೆಗಳು ಕಂಡುಬಂದರು. ದೇಶಿಯ ಸಂಸ್ಕೃತಿಯ ಸೊಗಡನ್ನು ಪೂರ್ಣವಾಗಿ ತ್ಯಜಿಸದೆ. ಎರಡು ಅಂಶಗಳು ಸಮಿಳಿತಗೊಂಡದಿಷ್ಟೆ ಎರಡು ಸಂಸ್ಕೃತಿಗಳು ಪರಸ್ಪರ ಪೂರಕವಾಗಿ ಸ್ಪಂದಿಸಿದ್ದು ಈ ಕಾಲದ ವೈಶಿಷ್ಟ್ಯವಾಗಿದೆ. ಇವರ ಕಾಲದಲ್ಲಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯ ಸಾಹಿತ್ಯ ಹಾಗೂ ಶೈಕ್ಷಣಿಕ ಬೇಳವಣಿಗೆಗೆ ಪ್ರಮುಖ ಕೇಂದ್ರವಾಯಿತು(3). ಕಾಶ್ಮೀರ ಹಾಗೂ ಹೈದರಬಾದ್ ಸಂಸ್ಥಾನಗಳನ್ನು ಬಿಟ್ಟರೆ 3ನೇ ದೊಡ್ಡ ಸಂಸ್ಥಾನ ಭೌಗೋಳಿಕ ಹಾಗೂ ರಾಜಕೀಯವಾಗಿ ಇದ್ದರೆ(4) ಈ ಸಂಸ್ಥಾನದ ಸಾಂಸ್ಕೃತಿಕ ಹಿರಿಮೆಯಲ್ಲಿ ಇತರೆ ಸಂಸ್ಥಾನಗಳಿಗಿಂತ ಹಿರಿದಾಗಿತ್ತು. ಕನ್ನಡ ಸಾಹಿತ್ಯದ ರಮ್ಯ ಕಾಲವೆಂದು ಈ ಕಾಲವನ್ನು ಕರೆಯಬಹುದು. ಬಿ.ಎಂ. ಶ್ರಿಕಂಠಯ್ಯನವರು ಇಂಗ್ಲೀಷ್ ಗೀತೆಗಳನ್ನು ರಚಿಸಿದರು. ಆಂಗ್ಲ ಸಾಹಿತ್ಯದ ಭಾಷಾಂತರ ಕಾರ್ಯವನು ಕೈಗೆತ್ತಿಕೊಂಡು ಶೆಲ್ಲಿ, ವಿಲಿಯಂ ವರ್ಡ್ಸವರ್ತ್, ಬ್ರೌನಿಂಗ್, ಟೆನಿಸನ್, ಶೇಕ್ಸ್‌ಪಿಯರ್, ಬೈರನ್ ಮುಂತಾದವರ ಪದ್ಯಗಳು ಕನ್ನಡಕ್ಕೆ ತರ್ಜುಮೆ ಮಾಡಿಸಿದರು. ಕನ್ನಡದ ನವೋದಯ ಸಾಹಿತ್ಯ ಪ್ರಕಾರ ಈ ಕಾಲದಲ್ಲಿ ಸಾಹಿತ್ಯ ಬೆಳವಣಿಗೆ ಕಂಡಿತು..[5]

**ಸಂಗೀತ ಕಲೆ**

ನಾಲ್ವಡಿ ಕೃಷ್ಣರಾಜ ಒಡೆಯರು ಒರ್ವ ಸಂಗೀತ ಪ್ರೇಮಿ ಹಾಗೂ ಸ್ವತಃ ಸಂಗೀತಗಾರರಾಗಿದ್ದರು. ಇದಕ್ಕೆ ಅವರ ಅನುವಂಶಿಕತೆಯ ಹಿನ್ನಲೆ ಇತ್ತು. ಇಲ್ಲಿನ ಸಂಗೀತ ಅಂತರರಾಷ್ಟ್ರೀಯ ಮಟ್ಟದಲ್ಲಿ ಮೈಸೂರನ್ನು ಕೊಂಡೊಯ್ಯುತ್ತಿದ್ದರು. ಸಂಗೀತಗಾರರ ಆಯ್ಕೆಯಲ್ಲಿ ಇವರು ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಇವರ ಆಸ್ಥಾನದಲ್ಲಿ ದೇಶದ ವಿವಿಧ ಸಂಸ್ಥಾನಗಳ ಸಂಗೀತ ವಿದ್ವಾಂಸರಿಗೆ ಆಶ್ರಯ ನೀಡಿದ್ದರು. ಉತ್ತರಾದಿ ಹಾಗೂ ದಕ್ಷಿಣಾದಿ ಸಂಗೀತಗಳ ಸಮನ್ವಯ ಮಾಡಿದರು. ಪಾಶ್ಚಿಮಾತ್ಯ ಸಂಗೀತ ಪ್ರಕಾರಗಳನ್ನು ಅರಮನೆ ಸಂಗೀತದೊಂದಿಗೆ ಸಂಯೋಜಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ತಂದೆಯವರಂತೆ ಇವರು ಕೂಡ ನಾಟಕ, ಹಿಂದೂಸ್ತಾನಿ ಹಾಗೂ ಪಾಶ್ಚಿಮಾತ್ಯ ಸಂಗೀತ ಈ ಮೂರರಲ್ಲಿ ಸಮಾನವಾದ ಆಸಕ್ತಿ ಹಾಗೂ ಅಭಿರುಚಿಯನ್ನು ಬೆಳಸಿಕೊಂಡಿದ್ದರು. ಮೂರು ಸಂಗೀತ ಪ್ರಕಾರಗಳಿಗೆ ಪೋಷಣೆ ಹಾಗೂ ಮನ್ನಣೆಯನ್ನು ನೀಡಿದ ಏಕೈಕ ಸಂಸ್ಥಾನವೆಂದರೆ ಮೈಸೂರು ಸಂಸ್ಥಾನ. ಉತ್ತಾರಾದಿ ಹಿಂದೂಸ್ತಾನಿ ಹಾಗೂ ದಕ್ಷಿಣಾದಿ ಸಂಗೀತಗಳು ಸಮನ್ವಯಗೊಂಡು ಸಹಬಾಳ್ವೆಯಿಂದ ಸಂಗೀತ ರಸಿಕರ ಮನತಣಿಸಿದ್ದು ಮೈಸೂರಿನಲ್ಲಿಯೇ. ಈ ಪ್ರಯೋಗಕ್ಕೆ ಪ್ರೇರಣೆ ನೀಡಿದರೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರು.

ನಾಲ್ವಡಿ ಕೃಷ್ಣರಾಜ ಒಡೆಯರಿಗೆ ವೀಣೆ, ಕೊಳಲು, ಪಿಟೀಲು, ಮೃದಂಗ, ನಾದಸ್ವರ, ಸಿತಾರ್, ಪಿಯಾನೊ ಮತ್ತು ಸ್ಯಾಕ್ಸೋಫೋನ್ ಮುಂತಾದ ಸಂಗೀತ ವಾದ್ಯಗಳನ್ನು ನುಡಿಸುವಲ್ಲಿ ಪ್ರೌಢಿಮೆಯನ್ನು ಹೊಂದಿದ್ದರು. ನಾದಸ್ವರ ಬಾಲ್ಯದಿಂದಲೂ ನುಡಿಸುವುದರಲ್ಲಿ ಆಸಕ್ತಿ ಹೊಂದಿದ್ದರು. ಸಂಗೀತ ಪ್ರೇಮಿಯಾಗಿದ್ದ ಇವರು ಸಂಗೀತ, ಸ್ವರ, ತಾಳ, ಲಯಗಳಲ್ಲಿ ದೋಷಗಳನ್ನು ಪತ್ತೆ ಹಚ್ಚುವಷ್ಟು ಪ್ರವೀಣರಾಗಿದ್ದರು. ಇವರ ಆಸ್ಥಾನ ದೇಶದ ಹಲವಾರು ಸಂಗೀತ ವಿದ್ವಾಂಸರಿಗೆ ಆಶ್ರಯತಾಣವಾಗಿತ್ತು. ಉತ್ತರಾದಿ ಹಾಗೂ ದಕ್ಷಿಣಾದಿ ಸಂಗೀತಗಳ ಸಮನ್ವಯದ ಜೊತೆಗೆ ಭಾರತೀಯ ಹಾಗೂ ಪಾಶ್ಚಿಮಾತ್ಯ ಸಂಗೀತಗಳ ಸಮ್ಮೇಳನದಿಂದ ಹೊಸ ಸಂಗೀತ ವಾದ್ಯಗಳು ಹಾಗೂ ಸಂಗೀತ ಪ್ರಕಾರಗಳನ್ನು ಆವಿಷ್ಕಾರಿಸಲು ನಾಲ್ವಡಿಯವರು ಪ್ರಯೋಗಶೀಲವಾದ ಪ್ರಯತ್ನ ಮಾಡಿದರು. ಪಾಶ್ಚಿಮಾತ್ಯ ಸಂಗೀತ ಪ್ರಕಾರಗಳನ್ನು ಅರಮನೆಯ ಸಂಗೀತದೊಂದಿಗೆ ಸಂಯೋಜಿಸಿದರು. ಅರಮನೆಯ ಬ್ಯಾಂಡ್‌ನವರಿಗೆ ಪಾಶ್ಚಿಮಾತ್ಯ ಸಂಗೀತ ಕಲಿಸಲು ವ್ಯವಸ್ಥೆ ಮಾಡಿದರು.

ಮಹಾರಾಜರು ಅರಮನೆಯ ಚಂದ್ರ ಶಾಲಾ ತೊಟ್ಟಿಯಲ್ಲಿ 1915ರಲ್ಲಿ ಸಂಗೀತ ಶಾಲೆಯನ್ನು ಆರಂಭಿಸಿದರು. ಈ ಶಾಲೆಗೆ ಯಾರು ಬೇಕಾದರೂ ಸೇರಬಹುದಾಗಿತ್ತು. ಆಸ್ಥಾನ ವಿದ್ವಾಂಸರುಗಳಿಂದ ಪಾಠ ಹೇಳಿಸಲಾಗುತ್ತಿತ್ತು. ಜೊತೆಗೆ ಭಾರತೀಯ ಸಂಗೀತ ಹಾಗೂ ಪಾಶ್ಚಿಮಾತ್ಯ ಸಂಗೀತ ವಾದ್ಯಗಳನ್ನು ಸಂಗ್ರಹಿಸುವ ವ್ಯವಸ್ಥೆ ಮಾಡಿದರು. ಇದಲ್ಲದೆ ಹಿಂದೂಸ್ತಾನಿ, ಕರ್ನಾಟಕ, ಪಾಶ್ಚಿಮಾತ್ಯ ಸಂಗೀತ ವಾದ್ಯಗಳ ಜೊತೆ ಬರ್ಮಾ, ಜಾವಾ, ಇಂಡೋನೇಷ್ಯಾ, ಮಲೇಶಿಯಾ, ಥೈಲ್ಯಾಂಡ್, ಜಪಾನ್ ಮುಂತಾದ ದೇಶಗಳ ವಾದ್ಯಪರಿಕರಗಳನ್ನು ಸಂಗ್ರಹಿಸಿದರು. ಅರಮನೆಯಲ್ಲಿ ಆರ್ಕೇಸ್ಟ್ರಾವನ್ನು ಆರಂಭಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಕರ್ನಾಟಕ ಸಂಗೀತ ವಿದ್ವಾಂಸರು ಖ್ಯಾತ ಸಂಗೀತಕಾರರಾಗಿದ್ದರು. ಶಿಖಾಮಣಿ, ಶೇಷಣ್ಣ, ಸುಬ್ಬಣ್ಣ, ಗಾನವಿಶಾರದ ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರು, ಆನೇಕಲ್ಲು ಶಿವರುದ್ರಪ್ಪ, ಬೈರವಿ ಕೆಂಪೇಗೌಡ, ಮಳವಳ್ಳಿ ಸುಬ್ಬಣ್ಣ, ಮೈಸೂರು ವಾಸುದೇವಾಚಾರ್ಯ, ದೊರೆಸ್ವಾಮಿ ಅಯ್ಯಂಗಾರ್, ವಿ. ಚೌಡಯ್ಯ ಮುಂತಾದವರು ಇದ್ದರು. ಪಿಟೀಲು ಶಿವರುದ್ರಪ್ಪನವರಿಗೆ ನಾಲ್ವಡಿಯವರು ಉಧಾರ ಪ್ರೋತ್ಸಾಹದಿಂದಲೆ ಬೆಳೆಸಿದರು. ಇವರಿಗೆ ಬಿಡಾರಂ ಕೃಷ್ಣಪ್ಪನವರ ಬಳಿ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿ ಮಾಸಿಕ ರೂ. 5.00 ಗಳ ವಿದ್ಯಾರ್ಥಿವೇತನ ನೀಡಿದರು. ವಿಶೇಷವಾದ ಕೈಗಡಿಯಾರವನ್ನು ವಿದೇಶದಿಂದ ತಂದು ಶಿವರುದ್ರಪ್ಪನವರಿಗೆ ನೀಡಿದರು. ನಂತರದಲ್ಲಿ ಶಿವರುದ್ರಪ್ಪನವರಿಗೆ ಆಸ್ಥಾನ ವಿದ್ವಾನ್‌ರನ್ನಾಗಿಸಿದರು.

ಶೇಷಣ್ಣನವರು ದಕ್ಷಿಣ ಭಾರತದಲೆಲ್ಲಾ ಪ್ರವಾಸ ಮಾಡಿ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟು ಪ್ರಸಿದ್ಧಿ ಪಡೆದರು. ತಿರುದಾಂಕೂರು, ರಾಮನಾಥಪುರ, ಪುದುಕೋಟೆ, ಹೈದರಬಾದ್‌ಗಳಲ್ಲಿ ಸಂಗೀತ

ಕಛೇರಿ ನೀಡಿದರು ಹಾಗೂ ಬರೋಡಾದ ಮಹಾರಾಜರು ಗಾಯಕ್ ವಾಡ್ ಪಲ್ಲಕ್ಕಿಯನ್ನು ಕೊಟ್ಟು ಸನ್ಮಾನಿಸಿದರು. ತಮಿಳುನಾಡಿನ ರಾಜ ಶೇಷಣ್ಣ ನಡೆಸಿಕೊಟ್ಟ ಕಾರ್ಯಕ್ರಮಕ್ಕೆ ಉಡುಗೊರೆ ಕೊಟ್ಟು ಗೌರವಿಸಿದರು. ಶೇಷಣ್ಣನವರು 6ನೇ ಜಾರ್ಜ್‌ನ ಸಿಂಹಾಸನರೋಹಣದ ಸಂದರ್ಭದಲ್ಲಿ ರಾಣಿಗೆ ನಡೆದ ಕಾರ್ಯಕ್ರಮದಲ್ಲಿ ವೀಣವಾದನ ಕಛೇರಿಯನ್ನು ನಡೆಸಿಕೊಟ್ಟರು. 1924 ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಸಂಗೀತ ಕಛೇರಿ ನಡೆಸಿಕೊಟ್ಟರು. ಮಹಾತ್ಮಗಾಂದೀಜಿಯವರು ಹಾಗೂ ಕಾಂಗ್ರೇಸಿನ ನಾಯಕರು ಇವರ ಕಲೆಯನ್ನು ಪ್ರಶಂಸಿದರು.[6] (ಸಂಪ್ತಕುಮಾರಚಾರ್ಯ ಸಂಗೀತ ಕಲೆಗೆ ಮೈಸೂರು ಒಡೆಯರ ಕೊಡುಗೆ ಮೈಸೂರು. ಪು.19) ಈ ರೀತಿಯಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಸಾಂಸ್ಕೃತಿಕ ರಾಯಭಾರಿಯಾಗಿ ಮೈಸೂರಿನ ಸಂಸ್ಕೃತಿಯನ್ನು ಎಲ್ಲಡೆ ಪಸರಿಸುವಂತೆ ಮಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರು ದರ್ಬಾರ್‌ನ ಸಂಗೀತಗಾರರನ್ನು ಆಯ್ಕೆ ಮಾಡುವಲ್ಲಿ ತುಂಬಾ ಆಸಕ್ತಿವಹಿಸುತ್ತಿದ್ದರು. ಪಿಟೀಲು ಶಿವರುದ್ರಪ್ಪನವರು ನಾಲ್ವಡಿಯವರ ಉದಾರ ಪ್ರೋತ್ಸಾಹದಿಂದ ಬೆಳದವರು ಇವರಿಗೆ ಬಿಡಾರಂ ಕೃಷ್ಣಪ್ಪನವರ ಬಳಿ ವಿಶ್ವವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿ ಮಾಸಿಕ ರೂ 5.00 ಗಳ ವಿದ್ಯಾರ್ಥಿವೇತನ ನೀಡಿದರು. ವಿಶೇಷವಾದ ಕೈಗಡಿಯಾರವನ್ನು ವಿದೇಶದಿಂದ ತಂದು ಶಿವರುದ್ರಪ್ಪನವರಿಗೆ ನೀಡಿದರು. ನಂತರದಲ್ಲಿ ಶಿವರುದ್ರಪ್ಪನವರು ಆಸ್ಥಾನ ವಿದ್ವಾಂಸರಾದರು. ನಾಲ್ವಡಿ ಕೃಷ್ಣರಾಜ ಒಡೆಯರು ಅರಮನೆ ಆರ್ಕೆಸ್ಟ್ರಾವನ್ನು ಆರಂಭಿಸಿದರು. ಅರಮನೆಯಲ್ಲಿ ಹಿಂದೂಸ್ತಾನಿ, ಕರ್ನಾಟಕ ಮತ್ತು ಪಾಶ್ಚಿಮಾತ್ಯ ಸಂಗೀತಗಳ ಆರ್ಕೆಸ್ಟ್ರಾವನ್ನು ಆರಂಭಿಸಿದರು. ಶೃತಿಗಳ ಬಗ್ಗೆ ಅಗಾಧವಾದ ಜ್ಞಾನವನ್ನು ಮಹಾರಾಜರು ಹೊಂದಿದ್ದರು. ಅರಮನೆಯ ಸಂಗೀತಗಾರರಿಗೆ ಎಲ್ಲಾ ಪ್ರಕಾರದ ಸಂಗೀತಗಳನ್ನು ಹಾಗೂ ಕನ್ನಡದಲ್ಲಿ ಸಂಗೀತ ಸಾಹಿತ್ಯ ರಚನೆಗೆ ಮುಂದಾದರು. ಕನ್ನಡ ಭಾಷೆಯಲ್ಲಿ ಸಂಗೀತ ಕೃತಿಗಳನ್ನು ಆಸ್ಥಾನದ ವಿದ್ವಾಂಸರು ರಚಿಸಲು ಪ್ರೋತ್ಸಾಹಿಸಿದರು. ಮುತ್ತಯ್ಯ ಭಾಗವತರು, ಚಾಮುಂಡೇಶ್ವರಿ ಅಷ್ಟೋತ್ತರ ನಾಮಾವಳಿ, ಭುವನೇಶ್ವರಿ ನೇನೇ ಮನವೇ ಕೃತಿಯನ್ನು, ಮೋಹನ ಕಲ್ಯಾಣಿ ರಾಗದಲ್ಲಿ ರಚಿಸಿದರು. ಮೈಸೂರು ವಾಸುದೇವಾಚಾರ್ಯರ ಶಂಕರಾಭರಣಂ ಅನ್ನು ಮಹಾರಾಜರ ಕೋರಿಕೆಯ ಮೇಲೆ ರಚಿಸಿದರು[7] ನಾಲ್ವಡಿಯವರ ಆಸಕ್ತಿಯಿಂದ ಇದು ಸಾಧ್ಯವಾಯಿತು. ಚಿಂತನದಲ್ಲಿ ವೆಂಕಟರಾವ್, ವೀಣೆ ಶಿವರಾಮಯ್ಯ, ಪಿಟೀಲು ಚೌಡಯ್ಯ, ಬಿ. ದೇವೇಂದ್ರಪ್ಪ ಮುಂತಾದವರು ಆಸ್ಥಾನ ವಿದ್ವಾಂಸರಾಗಿದ್ದರು. ಹೊಸ ಸಂಗೀತ ವಾದ್ಯಗಳ ಆವಿಷ್ಕಾರಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕೈ ಹಾಕಿದರು.

**ಹಿಂದೂಸ್ತಾನಿ ಸಂಗೀತ**

ಮೈಸೂರು ಸಂಗೀತ ರಸಿಕರನ್ನು ಹಿಂದೂಸ್ತಾನಿ ಸಂಗೀತ ಆಕರ್ಷಿಸಿತು. ಸಂಗೀತವನ್ನು ಇವರ ತಂದೆ 10ನೇ ಚಾಮರಾಜ ಒಡೆಯರು ಪರಿಚಯಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಹಿಂದೂಸ್ತಾನಿ ಸಂಗೀತಕ್ಕೆ ಪ್ರೋತ್ಸವನ್ನು ಮುಂದುವರೆಸಿದರು. ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತದಲ್ಲಿ ಇದ್ದ ವಿದ್ವತ್ತು ಇಡಿ ಭರತ ಖಂಡದಲ್ಲಿ ಖ್ಯಾತಿಯನ್ನು ಪಡೆದಿತ್ತು.[8] ಇವರ ಕಾಲವನ್ನು ಹಿಂದೂಸ್ತಾನಿ ಸಂಗೀತದ ಸುರ್ವಣಯುಗವೆಂದು ಕರೆಯಬಹುದು. ಫಯಜ್‌ಖಾನ್, ನತನ್‌ಖಾನ್, ಭರ್ಕತುಲಾ ಮುಂತಾದವರು ಆಸ್ಥಾನದಲ್ಲಿದ್ದರು. ಒಮ್ಮೆ ನವಾಬ್‌ಖಾನ್‌ರವರ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇವರನ್ನು ನಂತರ ಆಸ್ಥಾನ ವಿದ್ವಾಂಸರಾಗಿ ನೇಮಕ ಮಾಡಿದರು. ಈ ಸಂಗೀತದಲ್ಲಿ ಖ್ಯಾತರಾಗಿದ್ದ ಠುಮರಿ ಹಾಡುಗಾರ್ತಿ ಗೌಹರ್ ಜಹಾನ್‌ರವರಿಗೆ ಮೈಸೂರಿನಲ್ಲಿ ವಸತಿಯನ್ನು ನೀಡಿ ಮಾಸಿಕ ರೂ. 500.00 ಗಳ ಗೌರವಧನ ನಿಗದಿಪಡಿಸಿದರು. ಹಾಗೆಯೇ ಗೋಹರ್‌ಜಾನ್ ರಂತೆ ರಜೂಲನ್‌ಬಾಯಿಯವರು ಠುಮರೀ ಗಾಯನದಲ್ಲಿ ಪರಿಣಿತರಾಗಿದ್ದು ಅಸ್ಥಾನದಲ್ಲಿ ಇದ್ದರು. ಆಕಾಲದ ಖ್ಯಾತ ಹಿಂದೂಸ್ತಾನಿ ಸಂಗೀತಗಾರರು ಇವರ ಆಸ್ಥಾನದಲ್ಲಿದ್ದರು. ಅವರುಗಳಲ್ಲಿ ಆಗ್ರಾ ಘರಾನೆಯ ನಿಸ್ಸಾರ್ ಹುಸೇನ್(ನತನ್‌ಖಾನ್), ಫಯಾಜ್ ಹುಸೇನ್ ಖಾನ್, ಅಫಿಜ್‌ಖಾನ್, ಜೈಪುರದ ರಹಿಮತ್ ಹುಸೇನ್‌ಖಾನ್, ಷಮಸುದ್ದೀನ್‌ಖಾನ್, ಇಂದೂರಿನ ಜಮಾಲ್‌ಖಾನ್, ಇನಾಯತ್‌ಖಾನ್, ಲತೀಫ್‌ಖಾನ್, ಉದಯಪುರದ ಬೋರಾಖಾನ್, ಬರ್ಹಾಂಪುರದ ವಜೀರ್‌ಖಾನ್, ಹಸನ್‌ಖಾನ್, ಬೊಂಬಾಯಿಯ ಕೃಷ್ಣಾಬಾಯಿ, ಅಬ್ದುಲ್ ಕರೀಂಖಾನ್, ದೆಹಲಿಯ ಮಹಮ್ಮದ್‌ಖಾನ್, ಬರೋಡಾದ ಜಮಾಲುದ್ದೀನ್ ಮುಂತಾದ ದಿಗ್ಗಜರು ಪ್ರಮುಖರಾಗಿದ್ದಾರೆ. ಒಡೆಯರು ಫಯಾಜ್‌ಖಾನ್‌ರವರಿಗೆ "ಆಫ್ತಾಬ್–ಇ–ಮುಜುಕಿ"(ಸಂಗೀತ ಬಾಸ್ಕರ), ಶ್ರೇಷ್ಠ ಸಿತಾರ್ ವಾದಕ ಅಫೀಜ್‌ಖಾನರಿಗೆ "ಆಫ್ತಾಬ್–ಇ–ಸಿತಾರ್" ಎಂಬ ಬಿರುದುಗಳನ್ನು ನೀಡಿ ಗೌರವಿಸಿದರು. ಇವರು ಒಡೆಯರ ಆಸ್ಥಾನದಲ್ಲಿ ಹಾಡಿ ಬೆಳಗಿದ ಶ್ರೇಷ್ಟ ಕಲಾವಿದರಾಗಿದ್ದರು.

**ಪಾಶ್ಚಿಮಾತ್ಯ ಸಂಗೀತ:** ನಾಲ್ವಡಿಯವರು. ಪಾಶ್ಚಿಮಾತ್ಯ ಸಂಗೀತ ಪ್ರಕಾರಗಳು ಹಾಗೂ ಸಂಗೀತದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು. ಒಳ್ಳೆಯ ಸ್ಯಾಕ್ಸೋಫೋನ್, ಪಿಯೋನೊ, ಅರ್ಗನ್ ಮತ್ತು ಕ್ಲಾರಯೋನೆಟ್ ಮುಂತಾದ ವಾದ್ಯಗಳನ್ನು ನುಡಿಸುತ್ತಿದ್ದರು. ಅರಮನೆ ಬ್ಯಾಂಡ್‌ಗೆ ತರಬೇತಿಯನ್ನು ಕೊಡಿಸಿದ್ದರು. ಹೆಚ್.ಎಂ.ವಿ ಕಂಪನಿಯಿಂದ ಸಂಗೀತ ವನ್ನು ಧ್ವನಿಮುದ್ರತಗೊಳಿಸಿದರು. ಪಾಶ್ಚಿಮಾತ್ಯ ಸಂಗೀತ ಗೋಷ್ಠಿಯನ್ನು ಜಗನ್ಮೂಹನ ಅರಮನೆಯಲ್ಲಿ ಅಯೋಜಿಸಿದ್ದರು[9] ಅರಮನೆ ಯುರೋಪಿಯನ್ ಬ್ಯಾಂಡ್‌ಗೆ ಪ್ರಸಿದ್ಧ ಪ್ರೆಂಚ್ ವಿದ್ವಾಂಸರಾದ ಡಿಪ್ರೈಸ್ (DeFrise) ರವರನ್ನು ನೇಮಿಸಿದ್ದರು. ಆಗಿಯೇ ಪೌಕ್ಸ್ ಲಿಪ್‌ಜಿಗ್ಸ್ ರವರನ್ನು ಕೂಡ ನೇಮಕ ಮಾಡಿಕೊಂಡರು. ಮಹಾರಾಜರ ಸಹೋದರಿಯರುಗಳು ಲಂಡನ್ನಿನ ಟ್ರಿನಿಟಿ ಕಾಲೇಜಿನ ಸಂಗೀತ ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ಪಾಶ್ಚಿಮಾತ್ಯ ಸಂಗೀತ ಸ್ವರ ಲಿಪಿಯಲ್ಲಿ ಅರಮನೆಯ ಸಂಗೀತಗಾರರಿಗೆ ತರಬೇತಿ ಕೊಡಿಸಿದರು. ಭಾರತದಲ್ಲಿಯೆ ಮೊಟ್ಟಮೊದಲಿಗೆ ಕರ್ನಾಟಕ ಸಂಗೀತದ ಬ್ಯಾಂಡ್‌ನ್ನು ಆರಂಭಿಸಿದರು.[10] 1920 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಪಾಶ್ಚಿಮಾತ್ಯ ಸಂಗೀತದ ವಿಭೂತಿ ಪುರಷ ಬೆತೊವನ್ ಆರಾಧನ ಶತಮಾನೋತ್ಸವನ್ನು ಆಯೋಜಿಸಿ ಸಂಗೀತ ರಸಿಕರನ್ನು ತಣಿಸಿದ್ದು, ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಗೀತಗಳ ಸಮನ್ವಯತೆಗಳಿಗೆ ಪೂರಕವಾದ ವಾತವರಣವನ್ನು ಸೃಷ್ಟಿಸಿತು. ಭಾರತದ ದೇಶಿಯ ಸಂಸ್ಥಾನಗಳ ಪೈಕಿ ಸಂಗೀತದ ವಾದ್ಯಮೇಳವೊಂದನ್ನು ಸರ್ಕಾರ ಸ್ಥಾಪಿಸಿದ್ದು ಮೈಸೂರಿನಲ್ಲಿಯೆ. ನಂತರ ಇದು ಆರಮನೆಯ ಬ್ಯಾಂಡ್ ಎಂದು ಪ್ರಸಿದ್ದಿ ಪಡೆಯಿತು. ಕ್ಷಯರೋಗ ಆಸ್ಪತ್ರೆಯಲ್ಲಿ ಪ್ರತಿ ವಾರ ಆರ್ಕೆಸ್ಟ್ರಾ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರು.[11] ಪಾಶ್ಚಿಮಾತ್ಯ ಸಂಗೀತದ ಸೊಬಗನ್ನು ಕನ್ನಡಿಗರು ಅನುಭವಿಸುವಂತೆ ಕರ್ನಾಟಕ ಸಂಗೀತ ಸೊಬಗನ್ನು ಪಾಶ್ಚಿಮಾತ್ಯರು ಅನುಭವಿಸುವಂತೆ ಮಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿದರು. ಕನ್ನಡ ಭಾಷೆಯ ಬೆಳವಣಿಗೆ ದೃಷ್ಟಿ ಕರ್ನಾಟಕ ಪರಿಷತ್ತನ್ನು ಸ್ಥಾಪನೆಗೆ ಕಾರಣವಾಗಿ

ಮಹಾಪೋಷಕರಾಗಿದ್ದರು. ಕನ್ನಡ ಭಾಷಾ ಸೇವೆಯನ್ನು ರಾಜ ಸೇವೆಯೆಂದು ಭಾವಿಸಿ ಭಾಷಾ ಸೇವಕರಿಗೆ ರಾಜ ಸೇವಾಸಕ್ತ ಎಂಬ ಬಿರುದನ್ನು ನೀಡಲಾರಂಭಿಸಿದ್ದು, ನಾಟ್ಯ, ಕಲೆ ಬೆಳವಣಿಗೆ ನಾಲ್ವಡಿಯವರ ಕೊಡುಗೆ ಚಿರಸ್ಮರಣೀಯವಾದದ್ದು, ಸಂಗೀತ ಮತ್ತು ನಾಟ್ಯ ಪ್ರಪಂಚಕ್ಕೆ ಸುವರ್ಣ ಯುಗ ಆರಂಭವಾಯಿತು ಎಂದು ಹೇಳುವುದು. ಈ ಹಿನ್ನಲೆಯಲ್ಲಿ ಮೈಸೂರನ್ನು ಸಕಲಕಲಾ ಕೇಂದ್ರ ಎಂದು ಕರೆಯಲಾಗುತ್ತಿತ್ತು. ದೇಶಿಯ ಕ್ರೀಡೆಗಳ ಜೊತೆ ಪಾಶ್ಚಿಮಾತ್ಯ ಕ್ರೀಡೆಗಳಾದ ಪೋಲೋ, ಕುದುರೆ ರೇಸ್ ಹಾಗಿಯೇ ದೇಶಿಯ ಕುಸ್ತಿಯ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು.

**ಚಿತ್ರಕಲೆ**

ನಾಲ್ವಡಿ ಕೃಷ್ಣರಾಜ ಒಡೆಯರು ಇಂದಿನ ಮಹಾರಾಜರುಗಳಂತೆ ಚಿತ್ರಕಲೆಗೆ ನಿಜವಾದ ಅರ್ಥದಲ್ಲಿ ಪ್ರೋತ್ಸಾಹ ನೀಡಿದರು. ಇವರ ಕಲಾಭಿಮಾನ ಜಗತ್‌ಪ್ರಸಿದ್ಧವಾಗಿತ್ತು. ಇವರ ಆಸ್ಥಾನದಲ್ಲಿ ಆನೇಕ ಕಲಾವಿದರಿಗೆ ಪ್ರೋತ್ಸಾಹ ದೊರೆಯಿತು. ರಾಜ ರವಿವರ್ಮಾ, ಕೆ. ವೆಂಕಟಪ್ಪ, ಕೆ. ಶಿವಯ್ಯ ಮುಂತಾದ ಹೆಸರಾಂತ ಕಲಾವಿದರಿಂದ ಸುಂದರವಾದ ಚಿತ್ರಗಳನ್ನು ಬರೆಸಿದರು. ಇವರ ಕಲಾ ಪ್ರಿಯತೆಗೆ, ಸಹಜ ರಕ್ತಗತ ಹಾಗೂ ತೋರಿಕೆಗಲ್ಲ, ಸಂಗೀತದಲ್ಲಿ ಹೇಗೋ ಇತರ ಲಲಿತ ಕಲೆಗಳಲ್ಲಿ ಮಹಾರಾಜರಿಗೆ ಆಸಕ್ತಿ ಇತ್ತು. ಇವರ ಕಾಲದಲ್ಲಿ ಪಾಶ್ಚಿಮಾತ್ಯ ಚಿತ್ರ ಕಲಾತಂತ್ರದಲ್ಲಿ ಕೃತಿಗಳು ರಚನೆಯಾದವು. ಪಾಶ್ಚಿಮಾತ್ಯ ರಾಷ್ಟ್ರಗಳ ಕಲಾಕಾರರಿಗೆ ಆಶ್ರಯ ನೀಡಿದರು. ಅವರುಗಳೆಂದರೆ ಜರ್ಮನಿಯ ಜೆರಾರ್ಜಿಟನ್, ಇಂಗ್ಲೇಂಡ್‌ನ ಸ್ಟರ್ಲಿನ್, ರಷ್ಯಾದ ರೋರಿಕ್, ಇಟಲಿಯ ಶಿಲ್ಪಿ ಕಾರ್ಟ್‌ಮನ್ ಭಾರತೀಯರಾದ ತಿರುವಾನಂತಪುರದ ರಾಜ ರವಿವರ್ಮಾ ಮತ್ತು ಸಹೋದರ ರಾಮವರ್ಮ, ಎಂ.ಎ. ಅಜೀಜ್, ಲಕ್ಷ್ಮಣ ಕೃಷ್ಣ, ಕೆ.ಕೇಶವ್ಯ, ಕೆ.ವೆಂಕಟಪ್ಪ, ವೈ. ನಾಗರಾಜು, ಎಂ. ನಂಜುಂಡಸ್ವಾಮಿ, ವೈ ಸುಬ್ರಮಣ್ಯರಾಜು, ಶಂಕರರಾಜು, ಎ.ಆರ್. ಅಯ್ಯಂಗಾರ್ ಮೊದಲಾದವರು.

ನಾಲ್ವಡಿಯವರು ತಮ್ಮ ದೇಶ ಹಾಗೂ ವಿದೇಶ ಸಂಚಾರದ ವೇಳೆ ಕಲಾವಿದರನ್ನು ತಮ್ಮ ಜೊತೆ ಕರೆದುಕೊಂಡು ಹೋಗಿ ಅಲ್ಲಿನ ಕಲಾಕೃತಿಗಳನ್ನು ಪರಿಚಯ ಮಾಡಿಸಿಕೊಡುತ್ತಿದ್ದರು. ಮೈಸೂರಿನಲ್ಲಿ ಆಧುನಿಕ ಚಿತ್ರಕಲೆ ಬೆಳೆಯಲು ಪೂರಕವಾದ ವಾತವರಣವಿತ್ತು. ಇಲ್ಲಿ ಆಧುನಿಕತೆ ಮತ್ತು ಐರೋಪ್ಯ ಚಿತ್ರಕಲೆಯ ತಾಂತ್ರಿಕತೆಗಳು ಸಂಯೋಜನಗೊಂಡಿದ್ದು ವಿಶೇಷ. 1909ರಲ್ಲಿ ಕೆ. ವೆಂಕಟಪ್ಪ ಇವರಿಗೆ ವಿದ್ಯಾರ್ಥಿ ವೇತನ ನೀಡಿ ಕಲ್ಕತ್ತಾದ ಕಲಾ ಶಾಲೆಗೆ ಉನ್ನತ ಶಿಕ್ಷಣಕ್ಕಾಗಿ ಕಳುಹಿಸಿಕೊಟ್ಟರು. ಅಲ್ಲಿ ಅವನೀಂದ್ರ ನಾಥ ಠ್ಯಾಗೋರರ ಶಿಷ್ಯರಲ್ಲಿ ಒಬ್ಬರಾದರು.[12] ಬಂಗಾಳದ ಕಲಾ ಶಾಲೆಯಲ್ಲಿ ರಾಷ್ಟ್ರೀಯ ಕಲಾ ಪರಂಪರೆಯ ಉದ್ದೀಪನಗೊಂಡಿತ್ತು. ಈ ಪರಂಪರೆಯಲ್ಲಿ ಕೆ. ವೆಂಕಟಪ್ಪನವರು ಶಿಕ್ಷಣ ಪಡೆದರು. ಇವರ ಶಿಕ್ಷಣಕ್ಕೆ ಪೂರ್ಣ ಪ್ರಮಾಣದ ಸಹಾಯ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರು 1926 ರಿಂದ 1940 ರವರೆವಿಗೆ ಕೆ. ವೆಂಕಟಪ್ಪನವರು ವಿಶೇಷವಾದ ಪ್ರೋತ್ಸಾಹ ಪಡೆದರು, ಬೇರೆ ಕಲಾವಿದರಿಗೆ ಇಷ್ಟೊಂದು ಮನ್ನಣೆ ದೊರೆಯಲಿಲ್ಲ.[13] ಇವರ ವೀಣಾ ಹುಚ್ಚು ರಾಧಾ, ಹರಿಣಿ, ಅರ್ಧ ನಾರೀಶ್ವರಿ ನಿಲಗಿರಿಯ ಚಿತ್ರಗಳು ಆಕರ್ಷಣೀಯವಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರು ರಾಜ ರವಿವರ್ಮಾರನ್ನು ಆಹ್ವಾನಿಸಿ ಅಂಬಾವಿಲಾಸ ಅರಮನೆಯ ಕಲಾ ನಿರ್ದೇಶಕರಾಗಿ ನೇಮಿಸಿ ತೈಲ ಚಿತ್ರಗಳನ್ನು ರಚಿಸಿ ಅರಮನೆಯ ಅಂದವನ್ನು ಹೆಚ್ಚಿಸಿದರು. 1924 ರಲ್ಲಿ ಜೆಮ್ಸ್ ಕನ್ಸನ್‌ರವರಿಂದ ಚಿತ್ರಶಾಲೆಯೊಂದನ್ನು ಆರಂಭಿಸಿದರು. ಅವನೀಂದ್ರ ನಾಥ ಠ್ಯಾಗೋರ್, ನಂದಲಾಲ್ ಬೋಸ್, ಕೆ. ವೆಂಕಟಪ್ಪ ಮುಂತಾದವರ ಕಲಾಕೃತಿಗಳನ್ನು ಸಂಗ್ರಹಿಸಿಟ್ಟರು. ಜಲವರ್ಣದ ಕಲೆಯು ಎಂ.ಎ ಅಜೀಜ್ ರವರಿಂದ ಬೆಳವಣಿಗೆ ಕಂಡಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರು 1935 ರಲ್ಲಿ ಫ್ರಾನ್ಸ್, ಜರ್ಮನಿ, ಇಂಗ್ಲೇಂಡ್ ಮೊದಲಾದ ರಾಷ್ಟ್ರಗಳಿಗೆ ಪ್ರವಾಸ ಹೋದಾಗ ವೈ. ನಾಗರಾಜುರವರನ್ನು ಕರೆದುಕೊಂಡು ಹೋಗಿ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಕಲಾವಿದ ನಂಜುಂಡಸ್ವಾಮಿಯವರನ್ನು ಕನ್ನಡನಾಡಿನ ರೆಂಬ್ರಾಂಟ್ ಎಂದು ಖ್ಯಾತರಾಗಿದ್ದಾರೆ.[14]

**ನೃತ್ಯ**

ಕಲಾಭಿಜ್ಞರು, ಕಲಾಪೋಷಕರೂ ಆದ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹದ ಫಲವಾಗಿ ನೃತ್ಯ ಪರಂಪರೆಯೂ ಸಂಸ್ಥಾನದಲ್ಲಿ ಮುಂದುವರಿಸಿ ಹೊಸಹೊಸ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹವನ್ನು ನೀಡುತ್ತಿದ್ದರು. ಬೈರತೂರು ವೆಂಕಟಲಕ್ಷ್ಮೀ, ತಿರುಮಕೂಡಲಿನ ಸುಂದರಮ್ಮ, ಚಂದ್ರವದನಮ್ಮ, ಪುಟ್ಟದೇವಮ್ಮ ನಾಗರತ್ನ, ರಮಾಮಣಿ, ಬೆಂಗಳೂರಿನ ವರಾಳು, ಕೋನಮಾರದೇವಿಯಮ್ಮ, ತ್ರಿಪುರ ಸುಂದರಮ್ಮ, ಮುಂತಾದವರು ದೇವದಾಸಿಯರು ಪ್ರಸಿದ್ಧ ನೃತ್ಯಗಾರ್ತಿಯರಾಗಿದ್ದರು.

ಕವೀಶ್ವರ ಗಿರಿಯಪ್ಪ ಹಾಗೂ ಕಾಶಿಗುರುರವರು ಭರತನಾಟ್ಯ ಕಲೆಯಲ್ಲಿ ಪಾರಂಗತರಾಗಿದ್ದರೆ, ಅಪ್ಪಯ್ಯ, ದಾಸಪ್ಪ, ಅಮೃತಪ್ಪ, ಕಿಟ್ಟಪ್ಪ, ಜೆಟ್ಟಿತಾಯಮ್ಮ ಪ್ರಸಿದ್ಧ ನಾಟ್ಯಶಾಸ್ತ್ರ ಪ್ರವೀಣರಾಗಿದ್ದರು. ಇವರುಗಳು ತಮ್ಮದೇ ಆದ ಹೊಸಶೈಲಿಯನ್ನು ಬೆಳೆಸಿಕೊಂಡು ಮಂಗಳ, ಶೃತಿ, ಅಲರಿಪು, ಸ್ವರಜತಿ, ವರ್ಣಂ, ಪದ, ತಿಲ್ಲಾನ ಮತ್ತು ಅಭಿನಯ, ಜಯದೇವ ಕವಿಯ ಅಷ್ಟಪದಿ(ಗೀತಗೋವಿಂದ)ಯ ನೃತ್ಯ ಪದ್ಧತಿಯಲ್ಲಿ ಮುಂದುವರೆದಿತ್ತು. ಈ ಪದ್ದತಿಯನ್ನು ಅತ್ಯಂತ ಯಶಸ್ವಿಯಾಗಿ ಮುಂದುವರೆಸಿದವರ ಕೋಲಾರದ ಕಿಟ್ಟಪ್ಪ ಮತ್ತು ಜಟ್ಟಿದಾಸಪ್ಪನವರ ಮಗಳಾದ ಜಟ್ಟಿತಾಯಮ್ಮ. ರುಕ್ಮಿಣಿದೇವಿ ಮತ್ತು ಕೃಷ್ಣ ಅಯ್ಯರ್‌ವರವರ ಸತತ ಪರಿಶ್ರಮದ ಫಲವಾಗಿ ಮತ್ತೆ ನೃತ್ಯ ಕಲೆ ಮತ್ತೆ ಪುನರುಜ್ಜೀವನ ಪಡೆಯಿತು. ರಾಮಗೋಪಾಲ್‌ರವರು ಒಂದು ನೃತ್ಯಶಾಲೆಯೊಂದನ್ನು ತೆರೆದು ಕಲೆಯನ್ನು ಪ್ರೋತ್ಸವನ್ನು ಅನಂತರ ದಲ್ಲಿ ಬಂದ ಯು.ಎಸ್..ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ ತಮ್ಮ ಕಲಾ ಸೇವೆಯಿಂದ ಸುಶಿಕ್ಷಿತ ಕುಲದ ಮಹಿಳೆಯರು ಈ ಕಲೆಯನ್ನು ಆಶ್ರಯಿಸಿ ಆರಾಧಿಸಬಹುದೆಂಬುದನ್ನು ಮನದಟ್ಟು ಮಾಡಿದರು.

ಜಟ್ಟಿತಾಯಮ್ಮ ನೃತ್ಯಕಲೆಗೆ ತಮ್ಮದೇ ಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದರು. ಆಕೆ ಭರತನಾಟ್ಯವನ್ನು ಶಾಸ್ತ್ರೋಕ್ತವಾಗಿ ಅಭ್ಯಸಿಸಿ ಸುಬ್ಬರಾಮಪ್ಪನವರಿಂದ ಸಂಗೀತವನ್ನು, ಕವೀಶ್ವರಗಿರಿಯಪ್ಪ ನವರಿಂದ ಅಭಿನಯ, ಚಂದ್ರಶೇಖರ ಶಾಸ್ತ್ರಗಳಿಂದ ಜಾವಳಿಗಳನ್ನು ಇವರು ಕಲಿತ್ತದ್ದಲದೆ, ಬಸವಪ್ಪ ಶಾಸ್ತ್ರಿಗಳಿಂದ ಕನ್ನಡ ಸಂಸ್ಕೃತ ಭಾಷೆಗಳ ನವರಸಭಾವವನ್ನು ಅಭ್ಯಾಸ ಮಾಡಿ, ಕಿರಿಯ ವಯಸ್ಸಿನಲ್ಲಿಯೇ ಅರಮನೆಯಲ್ಲಿ ಭರತನಾಟ್ಯ ಪ್ರದರ್ಶನ ನೀಡಿ ಮೆಚ್ಚುಗೆಯನ್ನು ಪಡೆದಿದರು.

**ನಾಟಕ**

ಮೈಸೂರು ಸಂಸ್ಥಾನದಲ್ಲಿ ಚಿಕ್ಕದೇವರಾಜ ಒಡೆಯರ ಕಾಲದಿಂದಲು ನಾಟಕ ಕಲೆಯು ಮನ್ನಣೆ ಪದೆದಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರು ಸಂಗೀತ ಮತ್ತು ನೃತ್ಯಗಳಿಗೆ ನೀಡಿದಂತೆ ನಾಟಕ ಕಲೆಗೂ ಉದಾರವಾದ ಪ್ರೋತ್ಸಾಹವನ್ನು ನೀಡಿದರು. ಆಸ್ಥಾನ ವಿದ್ವಾಂಸರು ಬಾಷಂತರ ಕಾರ್ಯವನ್ನು ಅರಂಬಿಸಿದರು ಸಂಸ್ಕೃತದ ಕೃತಿಗಳನ್ನು, ಇಂಗ್ಲೀಷ್ ಸಾಹಿತ್ಯದ ಶ್ರೇಷ್ಠ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿ ನಾಟಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದರು. ಮೈಸೂರಿನಲ್ಲಿ ಚಾಮುಂಡೇಶ್ವರಿ ನಾಟಕ ಕಂಪೆನಿ, ರತ್ನಾವಳಿ ನಾಟಕ ಕಂಪನಿ, ಗಿರಿಧರ ನಾಟಕ ಮಂಡಲಿ, ಮೊದಲಾದವು ಪ್ರಸಿದ್ಧ

ನಾಟಕ ಕಂಪನಿಗಳು. ಇವರು ಅರಮನೆಯ ನಾಟಕ ಕಂಪೆನಿಗಳಿಗೆ ಎಲ್ಲಾ ವಿಧವಾದ ಸಹಾಯ ಹಾಗೂ ಮನ್ನಣೆಯನ್ನು ನೀಡಿದರು. ನಾಟಕ ಕಂಪನಿಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯವನ್ನು ಕಲ್ಪಿಸಿದರು. ನಾಟಕಗಳಲ್ಲಿ ನಟಿಸುತ್ತಿದ್ದ ನಟರಿಗೆ, ಸಂಗೀತ ವಿದ್ವಾಂಸರಿಗೆ ಹಾಗೂ ಇತರೆ ನೌಕರರಿಗೆ ವೇತನವನ್ನು ಹೆಚ್ಚಿಸಲಾಯಿತು. ಅರಮನೆ ನಾಟಕ ಕಂಪನಿಯ ಪ್ರಮುಖ ನಟರುಗಳೆಂದರೆ ಲಕ್ಷ್ಮಿಪತಿಶಾಸ್ತ್ರಿ, ಸುಬ್ಬಣ್ಣ, ವೀರರಾಘವಚಾರ್, ಬೀಡಾರಂ ಕೃಷ್ಣಪ್ಪ ಮುಂತಾದವರು. ಈ ನಾಟಕ ಕಂಪನಿ ಶಾಕುಂತಲ, ರತ್ನಾವಳಿ, ಮನ್ಮಥವಿಜಯ, ಹರಿಶ್ಚಂದ್ರ ಮೊದಲಾದ ನಾಟಕಗಳನ್ನು ಪ್ರದರ್ಶಿಸುತ್ತಿದ್ದಿತು. ಅರಮನೆಯ ನಾಟಕ ಕಂಪನಿಯ ನಾಟಕಗಳು ಇಂದಿನ ಜಗನ್ಮೋಹನ ಅರಮನೆಯಲ್ಲಿ ಪ್ರದರ್ಶನಗೊಳ್ಳುತ್ತಿದ್ದುದು ವಿಶೇಷವಾಗಿತ್ತು ರಾಜಕುಂಟುಂಬದವರು, ಅಧಿಕಾರ ವರ್ಗದವರು ಈ ನಾಟಕಗಳನ್ನು ನೋಡತ್ತಿದ್ದರು. ಕೃಷ್ಣರಾಜ ಒಡೆಯರು ನಾಲ್ವಡಿ ಕೃಷ್ಣರಾಜ ಒಡೆಯರು ಬಾಲ್ಯದಿಂದಲೆ ನಾಟಕ ಕಲೆಯಲ್ಲಿ ಹೆಚ್ಚು ಆಸಕ್ತಿಯನ್ನು ರೂಡಿಸಿಕೋಂಡಿದರು. ತಮ್ಮ ಬಾಲ್ಯದಲ್ಲಿ ನಾಟಕಗಳನ್ನು ತಮ್ಮ ಸೋದರ–ಸೋದರಿಯರೊಂದಿಗೆ ಅರಮನೆಯ ಕರಿಕಲ್ಲು ತೋಟಿಯಲ್ಲಿ ಅಭಿನಯಿಸುತ್ತಿದ್ದರು.[15] ಈ ಕಾಲಕ್ಕೆ ಗುಬ್ಬಿ ಚನ್ನಬಸವೇಶ್ವರ ಕಂಪೆನಿ ಒಂದು ಹೆಸರಾಂತ ನಾಟಕ ಕಂಪನಿಯಾಗಿತ್ತು. ಗುಬ್ಬಿ ವೀರಣ್ಣನವರು ಮಾಲಿಕತ್ವವನ್ನು ವಹಿಸಿಕೊಂಡು ಅದನ್ನು ಬೆಳೆಸಿಕೊಂಡು ಬಂದರು. ಇವರು ಬೆಳ್ಳಾವೆ ನರಹರಿಶಾಸ್ತ್ರಿಯವರಿಂದ ಕೃಷ್ಣಲೀಲಾ, ಕೃಷ್ಣಪಾರಿಜಾತ, ಜಲಂಧರ, ಕೃಷ್ಣಗಾರುಡಿ ಮೊದಲಾದ ನಾಟಕಗಳನ್ನು ಬರೆಯಿಸಿ ಪ್ರದರ್ಶಿಸಿದರು. ಬಿ. ಪುಟ್ಟಸ್ವಾಮಯ್ಯನವರಿಂದ ರಚಿತವಾದ ಕುರುಕ್ಷೇತ್ರ ಈ ಕಂಪೆನಿಯ ಒಂದು ಅದ್ಭುತ ಪ್ರಯೋಗ. ವೀರಣ್ಣನವರು ಅದ್ದೂರಿಯ ರಂಗಸಜ್ಜಿಕೆ ಮತ್ತು ವೇಷಭೂಷಣಗಳಿಂದ ರಂಗಭೂಮಿಗೆ ವಿಶೇಷ ಮೆರುಗನ್ನು ತಂದುಕೊಟ್ಟರು. ಈ ಕಂಪನಿಯ ದಶಾವತಾರ ನಾಟಕ ಬೆಂಗಳೂರು ಒಂದರಲ್ಲೆ 128 ಪ್ರದರ್ಶನಗಳನ್ನು ಕಂಡಿತು. ಸದಾರಮೆ, ಕುರುಕ್ಷೇತ್ರ, ಅಕ್ಕ ಮಹಾದೇವಿ. ಸಂಪೂರ್ಣ ರಾಮಾಯಣ, ಕೃಷ್ಣಲೀಲಾ ಲವಕುಶ ಮುಂತಾದ ನಾಟಕಗಳು ನೆರೆಯ ರಾಜ್ಯಗಳಲ್ಲಿಯೂ ಅಪಾರ ಯಶಸ್ಸುಗಳಿಸಿದ್ದವು. ಗುಬ್ಬಿ ವೀರಣ್ಣನವರು ನಾಟಕಗಳಲ್ಲಿ ತಮ್ಮ ಹಾಸ್ಯಪಾತ್ರಗಳ ಮೂಲಕ ಜನರ ಮನಸ್ಸನ್ನು ಸೂರೆಗೊಂಡಿದ್ದರು. ರಂಗಭೂಮಿಗೆ ತಮ್ಮ ಅಸಾಧರಣ ಪ್ರತಿಭೆಯಿಂದ ದೀರ್ಘಕಾಲ ಸೇವೆಸಲ್ಲಿಸಿದ ವೀರಣ್ಣನವರಿಗೆ ಅನೇಕ ವಿಧವಾದ ಗೌರವ ಪ್ರಶಸ್ತಿಗಳು ಲಭಿಸಿದವು. ನಾಲ್ವಡಿ ಕೃಷ್ಣರಾಜ ಒಡೆಯರು ವೀರಣ್ಣನವರಿಗೆ "ವರ್ಸ್‌ಟೈಲ್ ಕಮಿಡಿಯನ್" ಎಂಬ ಬಿರುದು ನೀಡಿ ಸನ್ಮಾನಿಸಿದರು.

ಈ ಕಾಲದ ಮತ್ತೊಬ್ಬ ಪ್ರತಿಭಾನ್ವಿತ ನಟ ಎ. ವಿ. ವರದಾಚಾರ್. ಇವರೂ ಸಹ ನಾಟಕಗಳಲ್ಲಿ ಪಾತ್ರ ನಿರ್ವಹಿಸುತ್ತಿದು, ಉತ್ತಮ ನಟರಾಗಿದ್ದು ರತ್ನಾವಳಿ ನಾಟಕ ಸಭಾ ಮಂಡಲಿಯ ಮೇಲ್ವಿಚಾರಣೆಯನ್ನು ವಹಿಸಿಕೊಂಡು 20 ವರ್ಷಗಳ ಕಾಲ ಕನ್ನಡ ನಾಡಿಗೆ ಶ್ರೇಷ್ಠ ಮಟ್ಟದ ನಾಟಕಗಳನ್ನು ನೀಡಿದರು. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ, ರಂಗ ಸಂಗೀತದ ಹೊಸ ಪರಂಪರೆಯನ್ನು ರೂಪಿಸಿ, ಪಾತ್ರದ ವೇಷಭೂಷಣಗಳಿಗೆ ಸಹಜತೆ, ಅಭಿನಯ, ಹಾಸ್ಯಗಳಿಗೆ ಹೊಸಛಾಪನ್ನು ನೀಡುವುದರು ಮೂಲಕ ರಂಗಭೂಮಿಗೆ ಅಪೂರ್ವವಾದ ಕೊಡುಗೆಯನ್ನು ನೀಡಿದರು. ಇವರಿಗೆ "ಗಿಫ್ಟೆಡ್ ಆಕ್ಟರ್"" ಹಾಗೂ 'ನಾಟ್ಯಕಲಾ ಚತುರ' ಎಂಬ ಬಿರುದು ಲಭಿಸಿತು. ಮಹಮ್ಮದ್ ಪೀರ್, ಮಳವಳ್ಳಿ ಸುಂದರಮ್ಮ, ಹಿರಣ್ಣಯ್ಯ ಇವರು ಈ ಕಾಲದ ಶ್ರೇಷ್ಠ ನಟರಾಗಿ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿದ್ದರು. ಕೃಷ್ಣರಾಜ ಒಡೆಯರ ಕಾಲದಲ್ಲಿ ಅನೇಕ ಪ್ರಸಿದ್ಧ ನಾಟಕಕಾರರು ರಂಗಭೂಮಿಯನ್ನು ಶ್ರೀಮಂತಗೊಳಿಸುವ ಕಾರ್ಯದಲ್ಲಿ ತೋಡಗಿಸಿ ಕೊಂಡಿದ್ದರು.

ಶ್ರೀಮನ್ನಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಬೆಳವಣಿಗೆ ಅಹರ್ನಿಸಿಯಾಗಿ ದುಡಿದು ಈ ನಾಡಿನ ಸಂಸ್ಕೃತಿಯನ್ನು ಅಂತರಾಷ್ಟ್ರೀಯ ಮಟ್ಟಕೆ ತೆಗೆದುಕೊಂಡು ಹೋದರು. ಇವರ ಕಾಲದಲ್ಲಿ ಮೈಸೂರು ಸಂಸ್ಥಾನವು ಸಾಂಸ್ಕೃತಿಕವಾಗಿ ವಿಜೃಂಭಿಸುವುದರೊಂದಿಗೆ ದೇಶ ವಿದೇಶಗಳ ಸಂಸ್ಕೃತಿ ಚಿಂತಕರನ್ನು ತನ್ನೆಡೆಗೆ ಆಕರ್ಷಿಸಿತು. ಮೈಸೂರು ಸಂಸ್ಥಾನದ ಆಳ್ವಿಕೆ ತಮಗೆ ವಹಿಸಿದ ಕೆಲಸವೆಂದು ತಿಳಿದ ಅವರ ರಾಜಋಷಿಯಂತೆ ಬಾಳಿ ಬದುಕಿದರು. ಇವರನ್ನು ಆಧುನಿಕ ಜನಕ ಮಹಾರಾಜರೆಂದು ಕರ್ಮಯೋಗಿ ಪತ್ರಿಕೆ ಹೊಗಳಿತು. ಸಾಂಸ್ಕೃತಿಕ ಸಮನ್ವಯತೆಯನ್ನು ಸಂಸ್ಥಾನದಲ್ಲಿ ಸಾಧಿಸಿದರು. ಮೈಸೂರಿನ ಸಂಸ್ಕೃತಿ ನಾಡಿನ ಜನತೆಯ ಸ್ಮರಣೆಯಲ್ಲಿ ಮತ್ತು ಆಚರಣೆಯಲ್ಲಿ ಉಳಿಯುವುದಲ್ಲದೆ ದೇಶ–ವಿದೇಶಗಳಲ್ಲೂ ಹೆಗ್ಗಳಿಕೆಗೆ ಕಾರಣವಾಗಿರುವುದಕ್ಕೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ನೀಡಿದ ಕೊಡುಗೆಯೇ ಕಾರಣವಾಗಿದೆ.

**ಅಡಿ ಟಿಪ್ಪಣಿಗಳು**


1. ಪ್ರಬುದ್ಧ ಕರ್ನಾಟಕ ಸಂ. 68 .ಸಂಚಿಕೆ 270. (1987– ಮೈಸೂರು) ಪು. 24
2. QJMS Vol.XCV.No.3 P.86
3. Ibid P.83
4. Ibid. P. 7
5. ಶೇಷಗಿರಿರಾವ್ ಎಲ್.ಎಸ್. 'ಹೊಸಗನ್ನಡ ಸಾಹಿತ್ಯ ಚರಿತ್ರೆ' (ಬೆಂಗಳೂರು 2010) ಪು.7
6. ಸಂಪ್ಪಕುಮಾರಚಾರ್ಯ 'ಸಂಗೀತ ಕಲೆಗೆ ಮೈಸೂರು ಒಡೆಯರ ಕೊಡುಗೆ' (ಮೈಸೂರು 1995) ಪು.19
7. Krishnamuthy S Vageykara Vasudevacharya , (Mysore 1965) ಪು .129-131
8. ಸಿ.ಕೆ. ವೆಂಕಟರಾಮಯ್ಯ 'ಆಳಿದ ಮಹಾಸ್ವಾಮಿಯವರು' (ಬೆಂಗಳೂರು. 1941) ಪು.397
9. Letter From Maharaj's Palace to Trinity College, London Dated 21st March 1919. KSA
10. ಪ್ರಬುದ್ಧ ಕರ್ನಾಟಕ, ಅದೆ ಪುಟ.71)
11. Vedhavalli M B Mysore as a seat of Music during 19th and 20th Centuries Ph.D Theses Madras University (Madras. 1982) P.28
12. K. Venkatappa Diary, Mysore Divisional Archives, June 2,1916
13. Janaki Nair Mysore Modern (New Delhi 2012)-P.184
14. ಡಾ. ಅನಿತಾ ಎಂ.ಎಸ್ 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್' (ಮೈಸೂರು 2016) ಪು. ಸಂ.–283
15. ಸಿ.ಕೆ ವೆಂಕಟರಾಮಯ್ಯ 'ಪೂರ್ವಕ್ತ' ಪು. 104.